ಬೇಕೆಂದು ನಾನು ಸೂಚಿಸುತ್ತೇನೆ. ಒಂದು ವೇಳೆ ಕೇಂದ್ರ ಸರ್ಕಾರದವರು ಮಹಾರಾಷ್ಟ್ರದವರ ಹುಡುಗಾಟಿಕೆಗೆ ತಲೆಬಾಗಿದರೆ ಕೇಂದ್ರ ಸರ್ಕಾರ ಆ ರೀತಿ ನಡೆದುಕೊಂಡರೆ ಅವರ ಆ ಒಂದು ಭ್ರಮಣೆಯಿಂದ ಏನೇನೋ ಆದೀತೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

6-00 P.M.

HALF-AN-HOUR DISCUSSION ARISING OUT OF ANSWERS TO STARRED QUESTION No. 28 *re*: CLOSURE OF MANDYA NATIONAL PAPER MILLS

†ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನ ಹಳ್ಳಿ).—ಸ್ವಾಮಿ, ಈ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್‌ನ ವಿಚಾರ ಪ್ರಶ್ನೆಯಲ್ಲಿ ಬಂದಿತ್ತು. ಈ ಮಿಲ್ಲಿನ ವಿಷಯದಲ್ಲಿ ನಮಗೆ ಪೂರ್ಣವಾಗಿ ಅನುಮಾನವುಂಟಾಗಿದೆ ಎನ್ನುವುದನ್ನು ಇವೊತ್ತಿನ ದಿವಸದ ಅರ್ಧಗಂಟೆಯ ಚರ್ಚೆಯಲ್ಲಿ ವಿಮರ್ಶೆ ಮಾಡಬೇಕಾಗಿದೆ. ಸರ್ಕಾರದವರಿಗೆ ಕೈಗಾರಿಕೆಯನ್ನು ಜಾಸ್ತಿ ಮಾಡಬೇಕು, ಅದಕ್ಕೆ ಬಂಡವಾಳವನ್ನು ಒದಗಿಸಬೇಕು, ಜಮೀನು ಮತ್ತು ನೀರನ್ನು ಒದಗಿಸಬೇಕು ಹಾಗೂ ರಿಯಾಯ್ತಿ ದರದಲ್ಲಿ ಅವುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂಬ ಮಹದಾಶೆ ಇದೆ. ಇದನ್ನು ದುರುಪಯೋಗ ಪಡಿಸಿಕೊಂಡು ದೇಶದಲ್ಲಿ ಅನೇಕ ಮುಂದ್ರಾಗಳು ಮೈನೂರಿಗೆ ಓಡಿ ಬರುತ್ತಿರುವುದು ಉಂಟು. ಈ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ ಆರಂಭವಾದಾಗಿನಿಂದ ಇಂದಿನವರೆಗೂ ನೋಡಿದ ಪಕ್ಷದಲ್ಲಿ ಇದು ಚಿತ್ರ ವಿಚಿತ್ರವಾದ ಕೈಗಾರಿಕೆಯಾಗಿದೆ. ಇವೊತ್ತಿನ ದಿವಸ ಅಲ್ಲಿನ ಮ್ಯಾನೇಜಿಂಗ್ ಡೈರೆಕ್ಟರ ಮೇಲೆ ಯಾರು ಇದ್ದಾರೋ ಅವರ ಒಂದು ಇತಿಹಾಸವನ್ನು ನೋಡಿದ ಪಕ್ಷದಲ್ಲಿ ಅವರಿಗೆ ಯಾರೋ ಒಬ್ಬರು ಕೇಂದ್ರದ ಮಂತ್ರಿಗಳ ಸಂಬಂಧ ಇದ್ದು ಅವರ ಬೆಂಬಲದಿಂದ ಮಂಡ್ಯಾ ಸಕ್ಕರೆ ಕಾರ್ಖಾನೆಯಲ್ಲಿ ಉತ್ಪತ್ತಿಯಾಗುವ ಕಚ್ಚಾ ವಸ್ತುಗಳನ್ನು ಉಪಯೋಗಿಸಿಕೊಂಡು ಅಲ್ಲಿ ಮಂಡ್ಯಾ ನ್ಯಾಷನಲ್ ಪೇಪರ್ ಮಿಲ್ಲನ್ನು ಸ್ಥಾಪನೆ ಮಾಡಬಹುದು ಎಂಬ ಉದ್ದೇಶದಿಂದ ಅದನ್ನು ಸ್ಥಾಪನೆ ಮಾಡಲು ಅವರು ಯೋಚನೆ ಮಾಡಿದರು. ಅವರು ಇವೊತ್ತಿನವರೆಗೂ ಮೆಷನರಿ ಕೊಂಡದ್ದು ಎಲ್ಲರಗಳು, ರಶೀತಿಗಳು, ಪೋಚರುಗಳು ಮತ್ತು ಅವರು ಅಲ್ಲಿ ಕೆಲಸ ಮಾಡುತ್ತಿರುವ ಕಂಟ್ರಾಕ್ಟರುಗಳಿಗೆ ಕೊಟ್ಟ ಕಿರುಕುಳ ಇವುಗಳನ್ನು ಲೆಕ್ಕ ಹಾಕಿಕೊಂಡರೆ ಅದು ಒಂದು ಸಣ್ಣ ಮುಂಧ್ರಾ ಸಂಸ್ಥೆಯಾಗಿ ನಡೆದುಕೊಂಡು ಬಂದಿದೆ. ಇದನ್ನು ನಾನು ಇಲ್ಲಿ ಏತಕ್ಕೆ ಒತ್ತಿ ಹೇಳುತ್ತಿದ್ದೇನೆಂದರೆ, ಸರ್ಕಾರ ಮೊದಲು ಈ ಕಾರ್ಖಾನೆಗೆ 3½ ಲಕ್ಷ ರೂಪಾಯಿಗಳ ಬಂಡವಾಳವನ್ನು ಕೊಟ್ಟಿದೆ. 40 ಲಕ್ಷ ರೂಪಾಯಿಗಳ ಗ್ಯಾರೆಂಟಿಯನ್ನು ಕೊಟ್ಟಿದೆ. ಅದಕ್ಕೆ ಸರ್ಕಾರದವರು ಕೊಡುವ ಸಹಾಯಕ್ಕಿಂತ ಹೆಚ್ಚಿಗೆ ಸಹಾಯವನ್ನು ಕೊಟ್ಟಿದೆ. ಇದೇ ರೀತಿ ನಾರ್ಥಾರು ಕೈಗಾರಿಕೆಗಳಿಗೆ ಸರ್ಕಾರದವರು ಸಹಾಯವನ್ನು ಮಾಡಿದ್ದಾರೆ. ನಮ್ಮ ಸರ್ಕಾರದವರು ಕೈಗಾರಿಕೆ ದೇಶದಲ್ಲಿ ಜಾಸ್ತಿ ಬೆಳೆಯಲಿ ಎನ್ನುವ ಉದ್ದೇಶದಿಂದ ನಮ್ಮ ದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಬೇರೆ ಪ್ರಾಂತದವರನ್ನು ಆಕರ್ಷಣೆ ಮಾಡಲು ಪ್ರಯತ್ನ ಮಾಡಿದ್ದಾರೆ. ಇವೊತ್ತಿನ ದಿವಸ ಸರ್ಕಾರದವರು ಉಪಕಾರ ಮಾಡುವಂತಹ ಒಂದು ಯೋಜನೆಗೆ ಸೇರಿಕೊಂಡಿರುವರು ಬಹಳ ಜನ ಸಣ್ಣ ಮುಂಧ್ರಾಗಳು ಇದ್ದಾರೆ ಎಂದು ನಾನು ಸರ್ಕಾರಕ್ಕೆ ಈ ಮೂಲಕ ಎಚ್ಚರಿಕೆಯನ್ನು ಕೊಡಬೇಕಾಗಿದೆ. ಈ ಮಂಡ್ಯಾ ನ್ಯಾಷನಲ್ ಪೇಪರ್ ಮಿಲ್ಸ್‌ನವರು ಮತ್ತು ಇನ್ನು ಕೆಲವು ಕೈಗಾರಿಕೆಗಳವರು ಪರದೇಶದಲ್ಲಿ ಕೊಂಡ ಮೆಷನರಿಗೆ 20-30 ಪರ್ಸೆಂಟ್ ಜಾಸ್ತಿ ಹಣವನ್ನು ಕೇಳಿದ್ದಾರೆ. ತಾವು ಹಾಕುವ ಬಂಡವಾಳ 20 ಪರ್ಸೆಂಟ್ ಆಗಿದ್ದರೆ ಈ ಸರ್ಕಾರದಿಂದ, ಇಂಡಿಯಾ ಸರ್ಕಾರದ ಫೈನಾನ್ಸಿಯಲ್ ಕಾರ್ಪೊರೇಷನ್ನಿನಿಂದ, 30 ಪರ್ಸೆಂಟ್ ಬಂಡವಾಳವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿ ಪ್ರಯತ್ನಮಾಡಿ, ಕೈಗಾರಿಕೆಗಳನ್ನು ಸ್ಥಾಪನೆಮಾಡಿ ಅವುಗಳನ್ನು ನಡೆಸಿಕೊಂಡು ಬರುತ್ತಿರುವ ನಾರ್ಥಾರು ಕೈಗಾರಿಕೆಗಳು ಇವೆ. ಈ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಲಿನ ವಿಚಾರದಲ್ಲಿ ಹೇಳುವುದಾದರೆ, ಈ ಮಿಲ್ಲಿಗೆ ಸಾಮಾನುಗಳನ್ನು ಸಪ್ಲೈ ಮಾಡಲು ಯಾರು ಯಾರು ಕಂಟ್ರಾಕ್ಟ್ ತೆಗೆದುಕೊಂಡು ಸಾಮಾನುಗಳನ್ನು ಸಪ್ಲೈ ಮಾಡಿದ್ದಾರೆಯೋ ಆ ಸಂಬಂಧದಲ್ಲಿ ಅಂದಿನಿಂದ ಇಂದಿನವರೆಗೆ ಮಾಡಿರುವ ತಕ್ಕ ಬಿಲ್ಲುಗಳೆಲ್ಲವೂ ಬರೀ ಭೋಗಸ್ ಬಿಲ್ಲುಗಳು. ರಶೀತಿಗಳು, ಪೋಚರ್‌ಗಳು ಎಲ್ಲವೂ ಭೋಗಸ್. ನಾನು ಕೂಡ ಅಲ್ಲಿ ಒಮ್ಮೆ ಸಂಪರ್ಕ ಇಟ್ಟುಕೊಂಡಿದ್ದೆ. ನಾನು ಅಲ್ಲಿಗೆ ಹೋದಾಗ

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ಅಲ್ಲಯ ಅಧಿಕಾರಿಗಳು ಹೇಳಿದರು, ಯಾವುದೋ ಒಂದು ಸಾಮಾನಿಗೆ ಒಂದು ಟನ್ನಿಗೆ 200 ರೂಪಾಯಿಗಳಂತೆ ನುಳ್ಳು ಲೆಕ್ಕಕೊಟ್ಟರೆ 150 ರೂಪಾಯಿನಂತೆ ನಿಮಗೆ ಲೆಕ್ಕಕೊಡುತ್ತೇವೆ ಎಂದು ಹೇಳಿದರು. ಅಂದಿನಿಂದ ನಮಗೂ ಅವರಿಗೂ ವ್ಯವಹಾರ ನಿಂತು ಹೋಯಿತು. ಆ ಕೈಗಾರಿಕೆ ಇಂಥಾ ದುರವಸ್ಥೆಗೆ ಬಂದಿದೆ. ಮಂಡ್ಯಾ ಸಕ್ಕರೆ ಕಾರ್ಖಾನೆಯಿಂದ ಕಬ್ಬಿನ ಸಿಪ್ಪೆ ಮುಂತಾದ ಕಚ್ಚಾ ಸಾಮಾನುಗಳನ್ನು ತರಿಸಿಕೊಂಡು ಇವರು ಕಾಗದವನ್ನು ತಯಾರು ಮಾಡಬೇಕಾಗಿತ್ತು. ಅವರು ಈ ಕಾಗದದ ಕಾರ್ಖಾನೆಗೆ ಕಬ್ಬಿನ ಸಿಪ್ಪೆಯನ್ನು ಕೊಡುತ್ತಿದ್ದರು. ಇವರು ಅದಕ್ಕೆ ಬದಲಾಗಿ ಅವರಿಗೆ ಇದ್ದಿಲನ್ನು ಕೊಡುತ್ತಿದ್ದರು. ಈಗ ಸಕ್ಕರೆ ಕಾರ್ಖಾನೆಯವರು ಈ ಕಾಗದದ ಕಾರ್ಖಾನೆಗೆ ಕೊಡುತ್ತಿದ್ದ ಕಚ್ಚಾ ಸಾಮಾನುಗಳನ್ನು ನಿಲ್ಲಿಸಿದ್ದಾರೆ. ಕಂಟ್ರಾಕ್ಟರುಗಳು ಈ ಮಿಲ್ಲಿಗೆ ಸಪ್ಲೈಮಾಡುತ್ತಿದ್ದ ಸಾಮಾನುಗಳ ಬಗ್ಗೆ ಕೆಲವು ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಈ ಒಂದು ಕಾರ್ಖಾನೆಯ ವಿಚಾರದಲ್ಲಿ ನಮ್ಮ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು, ಕಂಪೆನಿಯ ಆಕ್ಟ್ ಪ್ರಕಾರ ಅವರ ಮೇಲೆ ಸರ್ಕಾರದವರು ಹತೋಟಿಯನ್ನಿಡುವುದ ಕ್ಕಾಗುವುದಿಲ್ಲ. ಕಂಪೆನಿಯ ಕಾನೂನುಗಳ ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದು ಎಂದು ಹೇಳಿದರು. 3½ ಲಕ್ಷ ರೂಪಾಯಿ ಒಂದು ಬಂಡವಾಳ, ಇನ್ನೊಂದು 40 ಲಕ್ಷ ರೂಪಾಯಿಗಳ ಬಂಡವಾಳವನ್ನು ಆ ಕಾರ್ಖಾನೆಯಲ್ಲಿ ಹಾಕಿರುವಾಗ ಅಲ್ಲಿಗೆ ಸರ್ಕಾರದ ವತಿಯಿಂದ ಒಬ್ಬ ಡೈರೆಕ್ಟರನ್ನು ಏತಕ್ಕೆ ನೇಮಿಸಬಾರದು? ಆ ಕಾರ್ಖಾನೆಯು ಇಷ್ಟೊಂದು ದುರವಸ್ಥೆಯಲ್ಲಿರುವಾಗ ಸರ್ಕಾರದವರು ಕಣ್ಣುಮುಚ್ಚಿ ಕುಳಿತುಕೊಂಡರೆ ಹೇಗೆ? ಗಿರಿಬಿದನೂರು ಸಕ್ಕರೆ ಕಾರ್ಖಾನೆಗೆ ಷೇರು ಬಂಡವಾಳ 20 ಲಕ್ಷ ರೂಪಾಯಿ ಗಳನ್ನು ಕೊಟ್ಟು ಜೊತೆಗೆ ಆ ಕಾರ್ಖಾನೆಯವರು ಕೊಡಬೇಕಾಗಿದ್ದ ಬಡ್ಡಿಗೋಸ್ಕರ ಸಿಂಡಿಕೇಟ್ ಬ್ಯಾಂಕಿಗೆ ಸರ್ಕಾರದವರು ಹೇಗೆ ಹಣವನ್ನು ಕೊಟ್ಟರೋ ಆ ಒಂದು ಪರಿಸ್ಥಿತಿ ಇದಕ್ಕೂ ಖಂಡಿತ ವಾಗಿಯೂ ಬರುತ್ತದೆ. ಇವೊತ್ತಿನ ದಿವಸ ಹತ್ತಾರು ಖಾಸಗೀ ಕಾರ್ಖಾನೆಗಳಿಗೆ ಸರ್ಕಾರದವರು ಗ್ಯಾರೆಂಟಿಯನ್ನು ಕೊಟ್ಟಿದ್ದಾರೆ. ಲಕ್ಷಾಂತರ, ಕೊಟ್ಯಾಂತರ ರೂಪಾಯಿಗಳಿಗೆ ಸರ್ಕಾರ ಗ್ಯಾರೆಂಟಿ ಯನ್ನು ಕೊಟ್ಟು ಕೈಗಾರಿಕೆಗಳಿಗೆ ಹಣವನ್ನು ಕೊಡಿಸಿದ್ದಾರೆ. ಈಗ ಮದ್ರಾಸಿನಲ್ಲಿ ಯಾವ ರೀತಿ ನಡೆಯುತ್ತದೆ ಎಂದರೆ ಯಾವುದೋ ಫ್ಯಾಕ್ಟರಿಗೆ ಲೈಸೆನ್ ಕೊಟ್ಟು ಸರ್ಕಾರ ಬಂಡವಾಳವನ್ನು ಕೊಟ್ಟರೆ, ಪ್ರತಿಯೊಂದು ಇರಾಖೆಯುವರು ಆ ಕೈಗಾರಿಕೆಯ ಆಡಳಿತ, ಮತ್ತು ಪ್ರಗತಿಯನ್ನು ಎಚ್ಚೆತ್ತು ನೋಡುತ್ತಾರೆ. ಅದೇ ರೀತಿ ನಮ್ಮ ಸರ್ಕಾರದವರು ಮಾಡಬೇಕು. ಒಂದು ವೇಳೆ ಆ ಕೈಗಾರಿಕೆ ಏನಾದರೂ ಹಾಳಾಗುವ ಸಂದರ್ಭ ಬಂದರೆ ಸರ್ಕಾರದವರು ಗ್ಯಾರೆಂಟಿ ಕೊಟ್ಟು ಕೊಡಿ ಸಿದ ಹಣದ ಹೊರೆ ಸರ್ಕಾರದ ಮೇಲೆ ಬೀಳುತ್ತದೆ, ದೇಶದ ಮೇಲೆ ಬೀಳುತ್ತದೆ. ಆದ್ದರಿಂದ ಸರ್ಕಾರ ದವರು ಇದನ್ನು ಎಚ್ಚೆತ್ತು ನೋಡದ ಪಕ್ಷದಲ್ಲಿ ತೊಂದರೆಯಾಗುತ್ತದೆ. ಯಾವ ಕಾರ್ಖಾನೆಗೇ ಆಗಲೀ ಸರ್ಕಾರದವರು ಹಣವನ್ನು ಕೊಟ್ಟರೆ ಅಲ್ಲಿಗೆ ಸರ್ಕಾರದವತಿಯಿಂದ ಒಬ್ಬರು ಡೈರೆಕ್ಟರನ್ನು ಹಾಕಿ ಅವರು ಸರಿಯಾಗಿ ಎಚ್ಚರಿಕೆಯಿಂದ ನೋಡಿಕೊಂಡರೆ ಆ ಕೈಗಾರಿಕೆ ಸರಿಯಾಗಿ ನಡೆಯುತ್ತದೆ. ಕೈಗಾರಿಕೆಗಳಲ್ಲಿ ಮ್ಯಾನೇಜಿಂಗ್ ಡೈರೆಕ್ಟರು ಏನು ಇರುತ್ತಾರೆಯೋ ಅವರು ಸ್ವಚ್ಛವಾದ ಆಡಳಿತ ವನ್ನು ನಡೆಸಬೇಕು. ಯಾವುದೇ ಕೈಗಾರಿಕೆಯನ್ನು ತೆಗೆದುಕೊಳ್ಳಿ, ಕಳ್ಳ ಡೈರೆಕ್ಟರುಗಳು, ಕಳ್ಳ ಬಿಲ್ಲುಗಳು ಜಾಸ್ತಿ ಆಗುತ್ತಿವೆ. ಇದನ್ನೆಲ್ಲಾ ನೋಡಿ ಎಚ್ಚೆತ್ತು ನೋಡಿಕೊಳ್ಳಬೇಕು. ಏತಕ್ಕೆಂದರೆ, ಇವೊತ್ತು ಕೈಗಾರಿಕೆಗಳನ್ನು ಬೆಳೆಸಬೇಕಾದರೆ ಸರ್ಕಾರದವರು ಕೈಗಾರಿಕೆಗಳಿಗೆ ಜಾಸ್ತಿ ಹಣವನ್ನು ಕೊಟ್ಟು ಗ್ಯಾರೆಂಟಿಕೊಟ್ಟು ನಾಳೆ ದಿವಸ ಏನಾದರೂ ತೊಂದರೆಯಾದರೆ ಸರ್ಕಾರದವರು ಕೊಟ್ಯಾಂತರ ರೂಪಾಯಿಗಳನ್ನು ದಂಡ ತೆರುವ ಪ್ರಸಂಗ ಬರಬಹುದು. ಇವೊತ್ತು ಎಷ್ಟೋ ಕಂಪೆನಿ ಗಳು ಹಾಳಾಗಿವೆ. ಅವರು ಸಾಲ ತೆಗೆದುಕೊಂಡು ಹಣಕ್ಕೆ ಬಡ್ಡಿ ಕೊಡುವುದಕ್ಕೆ ಸಾಧ್ಯವಾಗಿಲ್ಲ. ನಾನು ಅವುಗಳ ಹೆಸರುಗಳನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈ ದೃಷ್ಟಿಯಿಂದ ಸರ್ಕಾರದವರು ಯಾವುದೇ ಕೈಗಾರಿಕೆಗೇ ಆಗಲೀ ಹಣವನ್ನು ಕೊಡುವ ವಿಷಯದಲ್ಲಾಗಲೀ, ಗ್ಯಾರಂಟಿ ಕೊಟ್ಟು ಹಣವನ್ನು ಕೊಡಿಸುವ ವಿಷಯದಲ್ಲಾಗಲೀ ಸ್ವಲ್ಪ ಎಚ್ಚರಿಕೆಯನ್ನು ವಹಿಸಬೇಕು ಎಂದು ನಾನು ಹೇಳುತ್ತೇನೆ. ಇವೊತ್ತಿನ ದಿವಸ ಇಂಡಸ್ಟ್ರಿಯಲ್ ಕಾರ್ಪೊರೇಷನ್, ಫೈನಾನ್ಸಿಯಲ್ ಕಾರ್ಪೊರೇಷನ್ ಮೂಲಕ ಮತ್ತು ಸರ್ಕಾರದಿಂದ ಹಣ ಸಹಾಯವನ್ನು ಪಡೆದುಕೊಂಡಿರತಕ್ಕ ಹತ್ತಾರು ಕೈಗಾರಿಕಾ ಕಂಪೆನಿಗಳು ಆ ಹಣವನ್ನು ಸದುಪಯೋಗ ಮಾಡಿಕೊಳ್ಳದೇ ಹೋದ ಪಕ್ಷದಲ್ಲಿ ಅವುಗಳ ಮೂಲಕ ಸರ್ಕಾರಕ್ಕೆ ಏಟು ಬೀಳಬಹುದು. ಕೈಗಾರಿಕೆಗಳನ್ನು ಬೆಳೆಸಿ ದೇಶಕ್ಕೆ ಸಂಪಾದನೆಯನ್ನು ಜಾಸ್ತಿ ಮಾಡತಕ್ಕ ಎಲ್ಲಾ ಕೈಗಾರಿಕೆಗಳಿಂದಲೂ ಮೈನೂರು ದೇಶಕ್ಕೆ ಹಾನಿ ಆಗುವ ಸಂಭವ ಬಂದಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ಮಂಡ್ಯಾ ನ್ಯಾಷನಲ್ ಪೇಪರ್ ಕಾರ್ಖಾನೆ

ಯಲ್ಲಿಂತೂ ನುಳ್ಳು ಲೆಕ್ಕಗಳೇ ನಡೆದಿವೆ. ಇದರಲ್ಲಿ ಅನೇಕ ಜನಗಳಿಗೆ ಅನ್ಯಾಯ ಕೂಡ ಆಗಿದೆ. ಮುಂದೆ ಇದು ಸರಿಯಾಗಿ ನಡೆಯುತ್ತದೆ ಎನ್ನುವ ಧೈರ್ಯ ಕೂಡ ಇಲ್ಲ. ಇದಕ್ಕೆ ಸರ್ಕಾರ ಗ್ಯಾರೆಂಟಿ ಮೇಲೆ ಕೊಡಿಸಿರುವ ಹಣಕ್ಕೆರ್ಲಾ ಸರ್ಕಾರವೇ ಕೊಣೆಯಾಗಬೇಕಾದ ಸಂದರ್ಭ ಬರಬಹುದು. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ಸ್ವಲ್ಪ ಎಚ್ಚರಿಕೆಯಿಂದ ಇರಬೇಕು. ನಮ್ಮ ದೇಶದಲ್ಲಿ ಇಂಥಾ ಮುಂಧ್ರಾ ಸಂಸ್ಥೆಗಳು ಇನ್ನೂ ಕೆಲವಾರು ಇವೆ. ಇವುಗಳ ವಿಷಯಲ್ಲೂ ಸರ್ಕಾರದವರು ಎಚ್ಚರಿಕೆ ವಹಿಸಬೇಕು.

ಇನ್ನು ಕೊನೆಯದಾಗಿ, ನಾನು ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೆ. ಇವೊತ್ತಿನ ದಿವಸ ಇನ್ನು ಮುಂದೆ ಸರ್ಕಾರದವರು ಗ್ಯಾರೆಂಟಿ ಕೊಡುವ ಸ್ವರೂಪವನ್ನು ಬದರಾಯಿಸ ಬೇಕು. ಈಗಾಗಲೇ ಸರ್ಕಾರದವರು ನಾಲ್ಕಾರು ಕೈಗಾರಿಕೆಗಳಲ್ಲಿ ಕೈಸುಟ್ಟು ಕೊಂಡಿ ದ್ದಾರೆ. ಆದ್ದರಿಂದ ಈ ಕಂಪೆನಿಗಳಿಗೆ ಹಣ ಸಹಾಯವನ್ನು ಮಾಡಬೇಕಾಗಿದ್ದರೆ ಸಾಕಷ್ಟು ಮುನ್ನೆಚ್ಚರಿಕೆ ತೆಗೆದುಕೊಂಡು ಸಹಾಯ ಮಾಡಬೇಕು ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† **Sri DIGAMBER RAO B. KALMANKAR.**—Mr. Speaker, Sir, The hon'ble Member Sri Rajaiah Shetty has spoken on the facts. I only want to speak on the answers given to the questions during the question hour. It is quite clear that the Hon'ble Chief Minister has not furnished the necessary information in answering the questions. It was specifically asked whether the Government has found out the basic and immediate causes for the closure of the Mills. To that, the answer given was that the Government have received a report in this respect but as to what the immediate causes were was not given. That shows that there has been an evasion in giving the reply to this particular question. Also when asked to fix the responsibility on the officers of the Mill who were actually responsible for the closure of the Mill and thereby throwing so many workers out of employement, there was no specific reply to that. There was a very ambiguous reply that there are so many factors. That shows that the curtain was tried to be drawn on the affairs of the Mill instead of enlightening this House as to the real facts. It was very strange that it was admitted by the Hon'ble the Chief Minister that there is one Government director on the Board of Directors of this Mill. When there is a Government director, it is very strange that no action is taken, no enquiry is made, no effort is made to put things in order and the interests of Government are not safeguarded. That shows that the Government directors are guilty of dereliction of duty and there is sufficient reason to infer that Government has no control over its subordinate officers, or even over people of the rank of directors. This is a grave thing which is mainly responsible for the closure of the Mill. It was said that it is governed by Company Law. I cannot understand why the Government cannot take action under the Company Law also. It was stated that Government would give all possible help if necessary. When Government has got its representative on the Board of Directors and when it was known that things were not going on properly, what steps were taken to set things right and who are to be held responsible for the losses already caused? It is no good going on giving help after the Mill is closed. From this I can infer that such concerns which have closed down or which have seen very bad days are only due to the negligence of the Government and its supervision of such concerns. If

(SRI DIGAMBAR RAO B. KALMANKAR)

this is the way in which Government runs such Mills, there is no hope that Government will do better in future. I can quote the example of M.S.K. Mills. So many things have happened there and even the amounts are not properly utilised. Even now new machinery was brought there but even after that it was closed. My submission is that the answers given were not correct and the Hon'ble Chief Minister must take the House into his confidence and furnish the causes for the closure of this Mill.

(Sri M. S. Krishnan rose)

Mr. DEPUTY SPEAKER.—Sri M. S. Krishnan has made a request to ask certain questions. Under rule 49, he is not permitted to speak. If he wants, he can put one or two questions after the reply is over.

† ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಈ ಮಂಡ್ಯ ಪೇಪರ್ ಮಿಲ್ಸ್ ವಿಚಾರದಲ್ಲಿ ಅನುಮಾನ ಎದ್ದಿರತಕ್ಕಂಥಾದ್ದು ಪ್ರಶ್ನೆಗಳನ್ನು ಕೇಳತಕ್ಕಂಥಾದ್ದು, ಜನಗಳ ಮನಸ್ಸನ್ನು ಕೆರಳಿಸಿರುವಂಥಾದ್ದಕ್ಕೆ ನ್ಯಾಯವಾದ ಕಾರಣಗಳು ಇವೆ. ಈ ಕಂಪೆನಿಯು ಬಗ್ಗೆ 1955-56 ರಲ್ಲಿ ಪ್ರಯತ್ನ ಶುರು ವಾಯಿತು. ಇದರ ಉದ್ದೇಶ ಕಾಗದ ತಯಾರು ಮಾಡಬೇಕು ಎಂದು. ದೇಶದಲ್ಲಿ ಕಾಗದದ ಕಾರ್ಖಾನೆ ಬಹಳ ಕಡಿಮೆ ಇತ್ತು. ಇದು ಅವಶ್ಯಕವಾಗಿ ಇರಬೇಕಾದ ಕಾರಣ ಇದು ಉಶ್ರಮವಾದ ಕೈಗಾರಿಕೆ, ಇದಕ್ಕೆ ಸಾಕಷ್ಟು ಸಹಾಯ ಮಾಡಬೇಕು ಎಂದು ಸರ್ಕಾರದ ಉದ್ದೇಶವಾಗಿತ್ತು. ಈ ಕಾರ್ಖಾನೆಯಲ್ಲಿ ಕಬ್ಬಿನ ಸಿಪ್ಪೆಯನ್ನು ಉಪಯೋಗಿಸಿ ಕಾಗದ ತಯಾರು ಮಾಡುತ್ತೇವೆ, ದೇಶಕ್ಕೂ ಅನುಕೂಲವಾಗುತ್ತದೆ ಎಂದು ಹೇಳಿದರು ಮತ್ತು ಮೈಸೂರು ಸರ್ಕಾರವನ್ನು ಸ್ವಲ್ಪ ಸಹಾಯ ಮಾಡಬೇಕೆಂದು ಕೇಳಿದರು. ಆಗ ಇದರ ಬಗ್ಗೆ ಏನೂ ಅನುಮಾನ ಇರಲಿಲ್ಲ. ಇದನ್ನು ವಿಚಾರ ಮಾಡಲು ಯಾರನ್ನು ನೇಮಿಸಿದ್ದರೋ ಅವರೂ ಬಂದು ಸಾಕಷ್ಟು ವಿಚಾರ ಮಾಡಿದ್ದಾರೆ. ಬೇರೆ ಕಂಪೆನಿಗಳೂ ಸಹಾ ನಡೆಯುತ್ತಾ ಇತ್ತು. ಅದರ ಮೇಲೆ ಮಂಡ್ಯದಲ್ಲಿ ಕಬ್ಬಿನ ಸಿಪ್ಪೆ ಸಾಕಷ್ಟು ಸಿಕ್ಕುತ್ತಿತ್ತು. ಅದರಿಂದ ಈ ಕಾರ್ಖಾನೆ ಮಾಡಬೇಕು ಎಂದು ಹೇಳಿ ಮಾಡಿತು. ಅಮೇರಿಕಾ ದೇಶದ ಒಂದು ದೊಡ್ಡ ಕಂಪೆನಿಯವರು ಇದಕ್ಕೆ ದುಡ್ಡು ಹಾಕುತ್ತಾರೆ, ಅವರು ಕೊಲಾಬರೇಟರ್ಸ್ ಆಗಿರುವುದರಿಂದ ಹೆಚ್ಚು ದುಡ್ಡು ಹಾಕುತ್ತಾರೆ ಎಂದು ಹೇಳಿದರು. ಅನೇಕ ವರ್ಷಗಳಿಂದ ಖಾಸಗೀ ಉದ್ದಿಮೆ ಬಂದರೆ ಅದಕ್ಕೆ ಶೇಕಡ 10-15 ಕೆಲವು ಸಮಯದಲ್ಲಿ ಇನ್ನೂ ಹೆಚ್ಚಾಗಿ ಮೂಲ ಧನದಲ್ಲಿ ತೆಗೆದುಕೊಂಡು ಶುರು ಮಾಡುವಂಥಾದ್ದು ಮತ್ತು ಇಂತಹ ಉದ್ದಿಮೆಗಳಿಗೆ ಸಹಾಯ ಮಾಡುವಂಥಾದ್ದು ಪೂರ್ವದಿಂದಲೂ ಬಂದಿರತಕ್ಕ ಪದ್ಧತಿ. ಅದೇ ರೀತಿ ನಾವು ಸಹಾ ಸಹಾಯ ಮಾಡಬೇಕು ಎಂದು ಒಪ್ಪಿಕೊಂಡೆವು. ಇದಕ್ಕೆ ಏನಾದರೂ ಕ್ಯಾಪಿಟಲ್ ಕಡಿಮೆ ಇದ್ದರೆ ಸರ್ಕಾರ ಬೊಕ್ಕಸದಿಂದ ಕೊಟ್ಟು ಕಾರ್ಖಾನೆಯ ಪ್ರಗತಿಗೆ ಅನೇಕ ರೀತಿಯ ಸಹಾಯ ಮಾಡಬೇಕಾಯಿತು. ಈ ಕಂಪೆನಿ 1961-62ನೇ ಇಸವಿಯಲ್ಲಿ ಪ್ರಾರಂಭವಾಯಿತು. ಒಂದು ಷೇರ್‌ಗೆ 10 ರೂಪಾಯಿ. ಈ ಕಂಪೆನಿಯಲ್ಲಿ ಅನೇಕ ಬ್ಯಾಂಕ್‌ಗಳವರು ಮತ್ತು ಕಾರ್ಪೊರೇಷನ್‌ನವರು ತಮ್ಮ ಬಂಡವಾಳವನ್ನು ಷೇರ್ ಮೂಲಕ ಒದಗಿಸಿದ್ದಾರೆ; ಅದರ ವಿವರಗಳು ಈ ರೀತಿ ಇದೆ :

Share capital :	Rs.
American collaborators, M/s. Parsons and Pitmoors	60,00,000
Bedi and Co., (P) Ltd., Bangalore	11,00,000
State Bank of Mysore	8,00,000
State Central Bank of India, Hyderabad	5,00,000
Bedi and Co., Management Ltd., Bangalore	5,00,000
Indian Overseas Bank Ltd.,	4,90,000
Canara Bank Ltd.,	4,00,000
Government of Mysore	3,94,000
Mysore Sugar Co.,	3,94,000

Preference shares :	Rs.
Life Insurance Corporation, Bombay	1,51,000
Industrial Credit and Investment Corporation	1,27,000
Union Bank of India Ltd., Bombay	6,68,000

ಈ ರೀತಿಯಾಗಿ ನಮ್ಮ ದೇಶದಲ್ಲಿ ದೊಡ್ಡದಾಗಿರತಕ್ಕ ಕಂಪೆನಿಗಳು ಮತ್ತು ಬ್ಯಾಂಕ್‌ಗಳು ಈ ಮಾಂಡ್ಯ ನ್ಯಾಷನರ್ ಪೇಪರ್ ಮಿರ್ಸ್‌ಗೆ ಸಹಾಯ ಮಾಡಿವೆ. ನಾವು ಹಾಕಿರತಕ್ಕಂಥ ಬಂಡವಾಳ ಶೇಕಡ ನಾಲ್ಕಕ್ಕಿಂತ ಕಡಿಮೆ. ಈ ರೀತಿ ಸರ್ಕಾರದವರು ಸಹ ಬಂಡವಾಳ ಹಾಕಿ ಈ ಕಂಪೆನಿಯನ್ನು ನಡೆಸಿಕೊಂಡು ಬರರಾಯಿತು. ಈ ಕಂಪೆನಿಯು——

Authorised share Capital	Rs. 4,50,00,000
Paid up capital	2,27,00,000

ಈ ಪೇಪರ್—ಮಿರ್ ಪ್ರಾರಂಭವಾದಾಗ ನಮ್ಮ ಮಹಾರಾಜರು ಬಂದ್ದಿದರು. ಉಪಾಧ್ಯಕ್ಷರಾದ ರಾಧಾಕೃಷ್ಣನ್ ಅವರು ಸಹ ಬಂದ್ದಿದರು. ಈ ರೀತಿ ಪ್ರಾರಂಭವಾದರೂ ಸಹ, ನಮ್ಮ ದುರಾದೃಷ್ಟವೋ ಏನೋ ಈ ಮಿರ್ ಪ್ರಾರಂಭದಿಂದಲೂ ಕಾಯಿಲೆಯಿಂದಲೇ ಮುಂದುವರೆದು ಕೊಂಡು ಬಂತು.

ಶ್ರೀ ಎಚ್. ಸಿದ್ದವೀರಪ್ಪ.—ಪ್ರಾರಂಭ ಮಾಡಿದ ನಕ್ಷತ್ರ ಚೆನ್ನಾಗಿರಲಿಲ್ಲವೆಂದು ಕಾಣುತ್ತದೆ.

ಶ್ರೀ ಎಸ್. ನಿಜಲಿಂಗಪ್ಪ.—ಕಡ್ಡಾಮಾರಾದ ಕಬ್ಬಿನ ಸಿಪ್ಪೆಯನ್ನು ಉಪಯೋಗಿಸಿಕೊಂಡು ಈ ಕಾಗದದ ಕಾರ್ಖಾನೆ ಚೆನ್ನಾಗಿ ನಡೆಯುತ್ತದೆಂದು ಲಕ್ಷಾಂತರ ರೂಪಾಯಿಗಳ ಬಂಡವಾಳವನ್ನು ಅನೇಕ ಕಂಪನಿಗಳವರು ಮತ್ತು ಬ್ಯಾಂಕ್‌ಗಳವರು ಹಾಕಿದಮೇರೆ ನಮ್ಮ ಸರ್ಕಾರದವರು ಸಹ ಬಂಡವಾಳವನ್ನು ಹಾಕಿದರು. ನಾವು ಹಾಕಿದ್ದು ಕೇವಲ ಮೂರು ಲಕ್ಷದ 94 ಸಾವಿರ ರೂಪಾಯಿಗಳು. ಕಾರ್ಖಾನೆ ಪ್ರಾರಂಭವಾದ ಮೊದಲನೆಯ ವರ್ಷ ಲುಕ್ಸಾನಾಯಿತು. ಎರಡನೆಯ ವರ್ಷ ರಾಭಬಂತು. ಮೂರನೇಯ ವರ್ಷ ಕೆಳಗೆ ಹೋಯಿತು. ನಂತರ ನಾವು ಕಣ್ಣು ಮುಚ್ಚಿ ಕುಳಿತು ಕೊಳ್ಳಲಿಲ್ಲ. ಈ ಕಾರ್ಖಾನೆಯಲ್ಲಿ ನಮ್ಮ ಒಬ್ಬ ಡೈರೆಕ್ಟರ್ ಇದ್ದರು. ಅವರನ್ನು ಕರೆಸಿ ಕೇಳಿದೆವು. ಈ ಕಾರ್ಖಾನೆಗೆ ಬಂದಿದ್ದ ಮೆಷಿನರಿ ಅಷ್ಟೊಂದು ಸಮರ್ಪಕವಾಗಿ ಕೆಲಸ ಮಾಡಲಿಲ್ಲವೆಂದು ತಿಳಿದು ಬಂತು. ಕಂಪೆನಿಯ ಆಡಳಿತಗಾರರನ್ನು ನಾನು ಕರೆಸಿ ಸಾಕಷ್ಟು ದಂಡಿಸಿ ಈ ರೀತಿಯಾದರೆ ಚೆನ್ನಾಗಿರುವುದಿಲ್ಲವೆಂದು ಹೇಳಿದ ಮೇರೆ ಮೆಷಿನರಿ ಸರಿಯಾಯಿತು, ಆದರೆ ಮುಂದೆ ನಡೆಸಲು ಬಂಡವಾಳವಿರಲಿಲ್ಲ. ಬಂಡವಾಳವಿಲ್ಲದ ಮೇರೆ ಬಹಳ ಮಟ್ಟಿಗೆ ಈ ಕಂಪೆನಿ ಮುರಿದು ಬಿದ್ದುಹೋಯಿತು. ಈ ಮಧ್ಯೆ ಈ ಕಂಪೆನಿಯು ಮ್ಯಾನೇಜಿಂಗ್ ಡೈರೆಕ್ಟರ್ ಅವರಿಗೂ ಮತ್ತೊಬ್ಬರಿಗೂ ಜಗಳವಾಯಿತು. ತಂದೆ ತಾಯಿಗಳ ಜಗಳದಲ್ಲಿ ಕೂನು ಬಡವಾಯಿತೆಂಬಂತೆ ಈ ಕಾರ್ಖಾನೆ ಮುಚ್ಚುವ ಸ್ಥಿತಿಗೆ ಬಂತು. ಇದೂ ಒಂದು ಕಾರಣವೆಂದು ಹೇಳಬಹುದು. ಬೇರೆ ಒಂದು ಮಿಷಿನರಿಯನ್ನು ತಂದು ಹಾಕುವ ದಕ್ಕೆ ತಡವಾಯಿತು. ಈ ಕಾರ್ಖಾನೆಗೆ ಒಂದು ಎಲೆಕ್ಟ್ರಿಕ್ ಟರ್‌ಬೈನ್ ತಂದು, ಅದು ಒಡೆದು ಹೋಯಿತು. ಇದರಿಂದ 18-20 ಲಕ್ಷ ರೂಪಾಯಿಗಳ ಲುಕ್ಸಾನಾಯಿತು. ಸರ್ಕಾರದವರು ಈ ಕಾರ್ಖಾನೆಗೆ ಸಹಾಯ ಮಾಡಬೇಕೆಂದು ಉದ್ದೇಶ ಬಂತು. ಮತ್ತು ಮಂಡ್ಯದಲ್ಲಿ ಸಿಗುವ ಕಬ್ಬಿನ ಸಿಪ್ಪೆ ಸಾಕಾಗುವುದಿಲ್ಲವೆಂದು ತಿಳಿದು ಬದಿರಿನ ಬೊಂಬನ್ನು ಸಹ ಉಪಯೋಗಿಸಿಕೊಳ್ಳುವುದಕ್ಕೆ ಹೇಳಿದೆವು. ಇಷ್ಟಾದರೂ ದಿವಸಕ್ಕೆ ಕೇವಲ 35 ಟನ್ ಮಾತ್ರ ಪೇಪರ್ ತಯಾರಾಗುತ್ತಿತ್ತು. ಈ ಬಗ್ಗೆ ತಜ್ಞರನ್ನು ವಿಚಾರಿಸಲಾಯಿತು. ಅವರು ಹೇಳಿದರು, ಈ ಕಾರ್ಖಾನೆ ಚೆನ್ನಾಗಿ ನಡೆಯ ಬೇಕಾದರೆ ದಿವಸಕ್ಕೆ 70-80 ಟನ್ ಕಾಗದವನ್ನಾದರೂ ತಯಾರಿಸಬೇಕು, 35-40 ಟನ್ ತಯಾರಿಸಿದರೆ ಉಪಯೋಗವಾಗುವುದಿಲ್ಲವೆಂದು ಹೇಳಿದರು. ಈ ರೀತಿ ವ್ಯವಹಾರ ನಡೆಯುತ್ತಿರುವಾಗಲೇ 1966ರಲ್ಲಿ ಕೃಷ್ಣರಾಜ ಸಾಗರದಲ್ಲಿ ನೀರು ಹೋಯಿತು, ಕಾರ್ಖಾನೆಗೆ ಬೇಕಾಗುವಷ್ಟು ನೀರು ಸಿಗಲಿಲ್ಲ. ಅಲ್ಲದೆ ನೀರು ಕಡಿಮೆಯಾದ್ದರಿಂದ ಹಾಕಿದ ಕಬ್ಬಿನ ಬೆಳೆ ಒಣಗಿಹೋಯಿತು. ಈ ಮಧ್ಯೆ ಕಂಪನಿಗೆ ಸಾಕಷ್ಟು ಸಾಲವಾಗಿತ್ತು. ಯಾವಾಗ ಈ ಕಾರ್ಖಾನೆ ಶಿಥಿಲವಾಯಿತು, ಆಗ ನಾವು ಏನಾದರೂ ಮಾಡಿ ಈ ಕಾರ್ಖಾನೆ ನಡೆದು ಕೊಂಡು ಹೋಗುವಂತೆ ಮಾಡಬೇಕೆಂದು ತೀರ್ಮಾನಿಸಿದೆವು. ಸಾಕಷ್ಟು ದುಡ್ಡು ಇಲ್ಲದೆ ನಡೆಯುವುದಿಲ್ಲವೆಂದು ತಿಳಿದುಬಂತು. ಅಲ್ಲದೆ ಈ ಕಾರ್ಖಾನೆ ನಿಂತರೆ ಸಾವಿರಾರು ಜನ ಕೆಲಸಗಾರರಿಗೆ

(ಶ್ರೀ ಎಸ್. ನಿಜಲಿಂಗಪ್ಪ)

ಕೆಲಸ ಹೋಗುತ್ತದೆಂದು ತಿಳಿದು ಎರಡು ಸಾರಿ 25 ಲಕ್ಷ ಮತ್ತು 15 ಲಕ್ಷ ರೂಪಾಯಿಗಳಂತೆ ಸಾಲವನ್ನು ಕೊಡಿಸಿದೆವು ಆದರೂ ಸಹ ಸರಿಯಾಗಿ ನಡೆಯಲಿಲ್ಲ. ಕಾರ್ಖಾನೆಯನ್ನು ಮುಚ್ಚಿಸಬಾರದು ಎಂಬುದು ಸರ್ಕಾರದ ನಿಲುವಾಗಿತ್ತು. ಆದರೆ ಸರಿಯಾಗಿ ನೀರು ಸಿಗದೆ ಕಬ್ಬಿನ ಬೆಳೆ ಒಣಗಿಹೋಗಿ, ಈ ಕಾರ್ಖಾನೆಗೆ ಬೇಕಾದ ಕಬ್ಬಿನ ಸಿಪ್ಪೆಯ ಸರಬರಾಜು ಕಡಿಮೆಯಾಯಿತು. ಈ ಕಂಪನಿಗಿದ್ದ ಸಾಲವನ್ನು ತೀರಿಸಬೇಕೆಂದು ಸಾಲವನ್ನು ಕೊಟ್ಟಿದ್ದ ಸಾವುಕಾರರು ದಿವಾಳಿ ಅರ್ಜಿಯನ್ನು ಹಾಕಿದರು. ಅನೇಕ ಜನ ಶ್ರೀಮಂತರು ಈ ಕಾರ್ಖಾನೆಯನ್ನು ವಹಿಸಿಕೊಳ್ಳಲು ಸಿದ್ಧರಿದ್ದರು. ಯಾರಿಗೂ ಕೊಡಬಾರದು ಎಂಬುದು ಸರ್ಕಾರದ ಉದ್ದೇಶವಾಗಿತ್ತು. ಯಾರಿಗಾದರೂ ವಹಿಸಿದರೆ ಪಾಲುದಾರರಿಗೆ ಅನಾನುಕೂಲವಾಗುತ್ತದೆ, ನಾವು ಕೊಟ್ಟ ಗ್ಯಾರಂಟಿ ಹೋಗಿ ಬಿಡುತ್ತದೆ, ಸರ್ಕಾರಕ್ಕೆ ಮತ್ತು ಪಾಲುದಾರರಿಗೆ ನಾನಾ ರೀತಿಯಿಂದ ನಷ್ಟವಾಗುತ್ತದೆ, ಅಲ್ಲದೆ ಬೇರೆ ದೇಶದವರು ಬಂದು ನಮ್ಮ ರಾಜ್ಯದಲ್ಲಿ ಬಂಡವಾಳ ಹಾಕಿರುವುದರಿಂದ, ಮಿರ್ ದಿವಾಳಿಯಾದರೆ ನಮ್ಮ ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲವೆಂದು ಯೋಚನೆ ಮಾಡಿ, ಫೈನಾನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾದವರಿಂದ ಸುಮಾರು 7—8 ಲಕ್ಷ ರೂಪಾಯಿಗಳನ್ನು ಕೊಡಿಸಿ ಮತ್ತೆ ಕಾರ್ಖಾನೆ ನಡೆದುಕೊಂಡು ಬರುವಂತೆ ಮಾಡಿದೆವು. ಈ ರೀತಿ ಮಾಡದಿದ್ದರೆ ಮೆಷಿನರಿ ಹಾಳಾಗುತ್ತಿತ್ತು. ಸುಮಾರು 450—500 ಜನರು ಕೆಲಸಗಾರರಿದ್ದಾರೆ. ಅಮೇರಿಕನ್ ಕೊರಾಬರೇಟರ್ಸ್ ಅವರು ನಮಗೇ ವಹಿಸಿ ಎಂದು ಕೇಳುತ್ತಾರೆ. ಅನೇಕ ಶ್ರೀಮಂತರು ನಾವು ವಹಿಸಿಕೊಳ್ಳುತ್ತೇವೆಂದು ಮುಂದೆ ಬಂದಿದ್ದರು. ಆ ರೀತಿ ವಹಿಸಿದ್ದರೆ ಷೇರ್‌ದಾರರಿಗೆ ಅನಾನುಕೂಲವಾಗುತ್ತಿತ್ತು. ಈ ಕಾರ್ಖಾನೆ ಚೆನ್ನಾಗಿ ದಿನಕ್ಕೆ 80 ಟನ್‌ನಂತೆ ಕಾಗದವನ್ನು ತಯಾರಿಸಬೇಕಾದರೆ ಏನು ಮಾಡಬೇಕು ಎಂಬ ಬಗ್ಗೆ ಫೈನಾನ್ಸ್ ಕಾರ್ಪೊರೇಷನನ್ನು ಕೇಳಿದೆವು. ಅನೇಕ ಸಾರಿ ಕಾಗದ ಬರೆದೆವು. ನಾವೇ ಬೊಂಬಾಯಿಗೆ ಹೋಗಿ ಬಂದೆವು. ಫಾಯಿನಾನ್ಸ್ ಕಾರ್ಪೊರೇಷನ್‌ವರು ಅಮೇರಿಕನ್ ರೊರಾಬರೇಟರ್ಸ್ ಅವರ ಮೂಲಕ ಕಾರ್ಖಾನೆಯನ್ನು ನಡೆಸಿ, ನಾವು ಎಷ್ಟು ಬೇಕಾದರೂ ಸಹಾಯ ಮಾಡುತ್ತೇವೆಂದು ಹೇಳಿದರು. ಫೈನಾನ್ಸ್ ಕಾರ್ಪೊರೇಷನ ಅವರ ಒಂದು ಅಭಿಪ್ರಾಯ ಹಾಗೂ ಅವರು ನಮಗೆ ಕೊಟ್ಟಿರತಕ್ಕಂಥ ಅಡ್ವೈಸ್ ಪ್ರಕಾರ ಈ ಎಲ್ಲವನ್ನು ನಡೆಸಿಕೊಂಡು ಹೋಗಬೇಕೆಂದು ತೀರ್ಮಾನಿಸಿದ್ದೇವೆ. ಅಲ್ಲದೆ ಬೇರೆ ಬೇರೆ ಆರ್ಥಿಕ ಸಂಸ್ಥೆಗಳಿಂದ ಮತ್ತು ಬ್ಯಾಂಕ್‌ಗಳಿಂದ 5—6 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿ ದಿನಕ್ಕೆ 80 ಟನ್‌ಗಳಷ್ಟು ಕಾಗದವನ್ನು ತಯಾರಿಸಬೇಕೆಂದು ತೀರ್ಮಾನಿಸಿದ್ದೇವೆ. ಮೊದಲು ಡೈರಕ್ಟರ್ ಒಬ್ಬರು ಇದ್ದರು. ಇನ್ನು ಮುಂದೆ ಯೋಗ್ಯರಾದ ಒಬ್ಬ ಜೇರಮನ್ನರನ್ನು ನೇಮಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ರೀತಿ ತೀರ್ಮಾನ ಮಾಡಿ ಕೊನೆಯ ಘಟ್ಟಕ್ಕೆ ಬಂದಿದ್ದೇವೆ. ಫೈನ್ಸಿಂಗ್ ಕಾರ್ಪೊರೇಷನ್‌ಗಳು ಏನಿವೆ, ಅವುಗಳು ಸಾಕಷ್ಟು ಹಣ ಒದಗಿಸುವುದಾಗಿ ತಿಳಿಸಿವೆ, ಸಾಧಾರಣವಾಗಿ ಎಲ್ಲರೂ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಅವರು ಒಪ್ಪಿಕೊಂಡ ಮೇಲೆ ಈ ಪ್ರಯತ್ನ

6-30 P.M.

ನಡೆದಿದೆ. ಈ ಕಂಪನಿ ಮುಂದೆ ನಡೆಯುತ್ತದೆ ಎಂದು ಹೇಳುತ್ತೇನೆ. 1968ನೇ ಫೆಬ್ರುವರಿ ಹೊತ್ತಿಗೆ ಈ ಕಂಪನಿ ಕೆಲಸ ಮಾಡುವುದಕ್ಕೆ ಪ್ರಾರಂಭವಾಗುತ್ತದೆ ಎಂಬ ಆಶೆ ಇದೆ. ಅದು ಆಗುತ್ತದೆ. ಈ ಕಂಪನಿ ಪ್ರಾರಂಭವಾಗದೇ ಇದ್ದರೆ ಷೇರ್ ಹೋಲ್ಡರ್ಸ್ ದುಡ್ಡು ಹೋಗುತ್ತದೆ ಹಾಗು ಸರಕಾರ ಕೊಟ್ಟಂಥ ಗ್ಯಾರಂಟಿ ಹೋಯಿತು. ಆದುದರಿಂದ ಇದಕ್ಕೆ ಮೂರು ನಾಲ್ಕು ಲಕ್ಷ ರೂಪಾಯಿ ಕೊಟ್ಟಿದೆ. ಫೈನಾನ್ಸ್ ಕಾರ್ಪೊರೇಷನ್ ಅರೇಳು ಲಕ್ಷ ರೂಪಾಯಿ ಇದಕ್ಕೆ ಖರ್ಚು ಮಾಡಿ ಇದನ್ನು ಉಳಿಸಿಕೊಂಡು ಬಂದಿದ್ದಾರೆ. ಈ ಕಂಪನಿಯ ಪರಿಸ್ಥಿತಿ ಈ ರೀತಿ ಇದೆ. ಇದು ಮುಂದೆ ಸರಿಯಾಗಿ ನಡೆಯುತ್ತದೆ ಎಂದು ನಮ್ಮ ಉದ್ದೇಶ. ಹೊರಗಿನವರು ಬಂದು ಬಂಡವಾಳ ಹಾಕುವುದಕ್ಕೆ ಸಿದ್ಧವಿದ್ದಾರೆ. ಆದರೆ ಮೈಸೂರಿನಲ್ಲಿ ಇಂಥ ಕಾರ್ಖಾನೆ ದಿವಾಳಿ ಆಯಿತು ಎಂದು ಆಗಬಾರದು ಎಂಬುದು ನಮ್ಮ ಉದ್ದೇಶ. ಒಂದುದಿನಕ್ಕೆ 80 ಟನ್ ಕಾಗದ ಉತ್ಪಾದನೆಯಾಗುವಂತೆ ಮಾಡಿ ಅದನ್ನು ದೊಡ್ಡದಾಗಿ ಮಾಡಿ ನಡೆಸಬೇಕು ಎಂದು ಇದ್ದೇವೆ. ಇದಕ್ಕಾಗಿ ಫೈನಾನ್ಸ್ ಕಾರ್ಪೊರೇಷನ್ ಸಹಾಯ ಮಾಡುತ್ತೇವೆ ಎಂದು ಅವರು ಮುಂದೆ ಬಂದಿದ್ದಾರೆ. ಐದಾರು ಕೋಟಿ ಬಂಡವಾಳ ಹಾಕಿದಂಥ ಕಂಪನಿ ನಡೆಸದೇ ಇದ್ದರೆ ನೋಡಿದವರು ಏನು ಅಂದಾರು ? ಅದುದರಿಂದ 1968ನೇ ಫೆಬ್ರುವರಿ ತಿಂಗಳಿನಲ್ಲಿ ಈ ಕಂಪನಿ ಪ್ರಾರಂಭವಾಗುತ್ತದೆ. ಇನ್ನು ಸರಕಾರ ಮಾಡಬೇಕಾದುದು ಏನೂ ಇರುವುದಿಲ್ಲ. ಎಲ್ಲವನ್ನೂ ಮಾಡಿದ್ದು ಆಗಿದೆ. ಬೇರೆಯವರ

ಕೈಗೆ ಈ ಕಂಪನಿ ಹೋಗಬಾರದು, ನಮ್ಮ ರಾಜ್ಯದಲ್ಲಿ ಈ ಕಂಪನಿ ನಡೆದು ಇಲ್ಲಿಯ ಜನರಿಗೆ ಸಾಕಷ್ಟು ಕೆಲಸ ಸಿಕ್ಕಬೇಕು ಮತ್ತು ನಮ್ಮ ಜನರಿಗೆ ಸಾಕಷ್ಟು ಕೆಲಸ ಸಿಕ್ಕುತ್ತದೆ ಎಂಬ ನಂಬಿಕೆ ನನಗೆ ಇದೆ. ಈ ಕಂಪನಿ ನರಿಯಾಗಿ ನಡೆದೀತು ಎಂದು ನನಗೆ ನಂಬಿಕೆ ಇದೆ.

Mr. DEPUTY SPEAKER.—There is a half-an-hour discussion. Mr. H. Siddaveerappa may move.

Sri H. SIDDAVEERAPPA.—We are all exhausted. This may be taken up tomorrow.

Mr. DEPUTY SPEAKER.—If the House feels like that, it may be taken up tomorrow.

HON'BLE MEMBERS.—Yes.

Mr. DEPUTY SPEAKER.—Then it may be taken up tomorrow. The House will now stand adjourned to meet tomorrow at 8-30 A.M.

The House adjourned at Thirty Minutes past Six of the Clock to meet at Thirty Minutes past Eight of the Clock on Saturday the 16th December 1967.

WD 9713—GPB—600—30-1-1968